


ವಯಸ್ಸೆಂದೂ, ಹತ್ತು ವರ್ಷ ವೇಶ್ಯಾವಾಟಿಕೆ ವೃತ್ತಿಯಲ್ಲಿದ್ದರೂ ಫ್ರೆಶ್ ಮಾಲೆಂದು ಗಿರಾಕಿಗಳನ್ನು ನಂಬಿಸಿ ಡಬ್ಬಲ್ ಕಮಿಷನ್ ಬಾಚ್ತೀಯಲ್ಲ, ಅದೇನು ಮಹಾನ್ ಪ್ರಾಮಾಣಿಕ ವ್ಯಾಪಾರವೇನು. ಸಾಲದೆಂಬಂತೆ ಮಧುಕೇಶ್ವರನ ಹೆಸರನ್ನಿಟ್ಟುಕೊಂಡೇ ಶರೀರ ವ್ಯಾಪಾರವನ್ನು ವೃತ್ತಿ ಮಾಡಿಕೊಂಡಿದ್ದೀಯ...'' ಎಂದು ವಿನಯವಾಗಿಯೇ ಝಾಡಿಸಿ ಅಲ್ಲಮಪ್ರಭುವೂ ವಿಸ್ಕಿ ಗ್ಲಾಸನ್ನು ಬಾಯಿಗಿಟ್ಟುಕೊಂಡಿದ್ದ. ಅಲ್ಲಮಪ್ರಭುವಿನ ಮಾತುಗಳಿಂದ ಮಧುಕೇಶ್ವರ ಬೇಸರವೇನೂ ಮಾಡಿಕೊಳ್ಳಲಿಲ್ಲ. ಬದಲಿಗೆ ನಗುತ್ತಾ, ''ನಿನ್ನ ಮಾತು ಹಂಡ್ರೆಡ್ ಪರ್ಸೆಂಟ್ ಕರೆಕ್ಟ್ ಅಲ್ಲಮಪ್ರಭು. ವ್ಯಾಪಾರದಲ್ಲಿ ವಂಚನೆ ಮಾಡುವವರಿಗೆ ನಾಚಿಕೆ, ಮಾನ, ಮರ್ಯಾದೆ, ಸ್ವಾಭಿಮಾನಗಳು ಇರುವುದಿಲ್ಲವಲ್ಲದೆ ಕೋಪವೂ ಬರುವುದಿಲ್ಲ. ಇಷ್ಟಕ್ಕೂ ನಾನು ಹೆಣ್ಣಿನ ರೂಪದ ಮಧುವನ್ನು ಸರಬರಾಜು ಮಾಡುವ ವ್ಯಾಪಾರದಲ್ಲಿ ತೊಡಗಿರುವುದರಿಂದ ನನ್ನ ಹೆಸರಿಗೂ, ವೃತ್ತಿಗೂ ಚನ್ನಾಗಿಯೇ ಹೊಂದಿಕೆಯಾಗಿದೆ. ಆದರೆ, ನಿನಗೆ ಮಾತ್ರ ಮೋಸ ಮಾಡಲಾರೆ. ನೀನು ನನ್ನ ಊರಿನವನಲ್ಲದೆ ವೇಶ್ಯೆಯೊಬ್ಬಳನ್ನು ಮದುವೆ ಮಾಡಿಕೊಂಡು ಬದುಕು ಕೊಡಲು ಹೊರಟಿರುವ ನಿನ್ನ ನಿರ್ಧಾರ ಸಾಮಾನ್ಯವಾದದ್ದೇನೂ ಅಲ್ಲ. ಸದ್ಯಕ್ಕೆ ಅದರ ಚರ್ಚೆ ಸಾಕು.'' ಎಂದು ಮಧುಕೇಶ್ವರ ಹೇಳುವುದರೊಂದಿಗೆ ಇಬ್ಬರೂ ಮಾತು ಕಡಿಮೆ ಮಾಡಿ ಕುಡಿದು, ಊಟ ಮಾಡಿದ್ದರು. ಬಿಲ್ ರಹಿತ ಡ್ರಿಂಕ್ಸ್ ಆದ್ದರಿಂದ ಇಬ್ಬರೂ ಸುಮಾರಾಗಿಯೇ ತೆಗೆದುಕೊಂಡಿದ್ದರು. ಹಾಗಾಗಿ, ಅಪರೂಪಕ್ಕೆ ಡ್ರಿಂಕ್ಸ್ ತೆಗೆದುಕೊಳ್ಳುತ್ತಿದ್ದ ಅಲ್ಲಮಪ್ರಭುವಿಗೆ ಸುಮಾರಾಗಿಯೇ ಕಿಕ್ ಏರಿತ್ತು. ಅವನಿಗಿಂತಲೂ ಎರಡು ಮೂರು ಪೆಗ್ ಜಾಸ್ತಿ ತೆಗೆದುಕೊಂಡಿದ್ದರೂ ಮಧುಕೇಶ್ವರ ಡ್ರಿಂಕ್ಸ್ ಮಾಡದವನಂತೆ ಸ್ಟಡಿಯಾಗಿಯೇ ಇದ್ದ. ''ಸರಿ, ನೀನು ಒಂದೆರಡು ಗಂಟೆ ಮಲಗಿ ರೆಸ್ಟ್ ತಗೊ, ಸಂಜೆ ಏಳು ಗಂಟೆಗೆ ಹೋಟೆಲ್ ಬಿಡೋಣ, ನಾನು ಆರೂಮುಕ್ಕಾಲು ಗಂಟೆಗೆಲ್ಲ ಇಲ್ಲಿರ್ತೀನಿ'' ಎಂದು 'ಬದನ್ ಪೆ ಸಿತಾರೆ ಲಪೇಟೆ ಹುಯೇ...' ಎಂಬ ಹಿಂದಿ ಹಾಡನ್ನು ಗುನುಗುತ್ತಾ ರೂಮು ಖಾಲಿ ಮಾಡಿದ್ದ ಮಧುಕೇಶ್ವರ.

ಮಧುಕೇಶ್ವರ ಅನೇಕ ವರ್ಷಗಳ ಹಿಂದೆ ಅಲ್ಲಮಪ್ರಭುವಿನ ಹೈಸ್ಕೂಲು ಕ್ಲಾಸ್‌ಮೇಟ್ ಆಗಿದ್ದರೂ, ಅವನಿಗೆ ಕ್ಲೋಸ್ ಆದದ್ದು ಎರಡು ತಿಂಗಳ ಹಿಂದೆಯಷ್ಟೇ. ಅದೂ ಗೋಕರ್ಣದಲ್ಲಿ. ಮತ್ತೂ ಹೇಳಬೇಕೆಂದರೆ, ಒಂದು ವಿಚಿತ್ರ ಸನ್ನಿವೇಶದಲ್ಲಿ. ಕರೆಕ್ಟಾಗಿ ಅಪ್ಪ ಸತ್ತ ದಿನದಿಂದಲೇ ಅಲ್ಲಮಪ್ರಭುವಿನ ಗ್ರಹಗತಿಗಳು ಬದಲಾಗಿದ್ದವು. ಬಿ.ಎಸ್ಸಿ. ಸೆಕೆಂಡ್ ಕ್ಲಾಸಿನಲ್ಲಿ ಪಾಸು ಮಾಡಿದ್ದರೂ, ಕೃಷಿಯಲ್ಲಿ ತೊಡಗಿದ್ದರಿಂದ ಯಾವ ಹೆಣ್ಣೂ ಅವನನ್ನು ಮದುವೆಯಾಗಲು ಮುಂದೆ ಬಂದಿರಲಿಲ್ಲ. ಹಾಗೆ ನೋಡಿದರೆ ಆ ಪ್ರಾಂತ್ಯದಲ್ಲಿ ಅಲ್ಲಮಪ್ರಭುವಿನದೊಬ್ಬನದೇ ಅಂತಹ ಸಮಸ್ಯೆಯಾಗಿರಲಿಲ್ಲ. ಆ ಜಿಲ್ಲೆಯ ನಾಲ್ಕೈದು ತಾಲ್ಲೂಕಿನ ಊರುಗಳಲ್ಲಿ ತೋಟ, ಗದ್ದೆ ನೋಡಿಕೊಂಡು ಊರಿನಲ್ಲೆ ಇರುವ ಸಾವಿರಾರು ಯುವಕರು ಮೂವತ್ತೈದು, ನಲವತ್ತು ವರ್ಷಗಳು ದಾಟಿದ್ದರೂ ಮದುವೆಯಾಗದೆ ಹಾಗೆಯೇ ಉಳಿದಿದ್ದಾರೆ. ಹಾಗಾಗಿ ಇತ್ತೀಚೆಗೆ ತುಂಬಾ ಸ್ಥಿತಿವಂತ ಕುಟುಂಬದ ಯುವಕರು ಕೂಡ ಸಣ್ಣಪುಟ್ಟ ಕೆಲಸಗಳನ್ನು ಹುಡುಕಿಕೊಂಡು ನಗರ, ಪಟ್ಟಣಗಳಲ್ಲಿ ಬಿದ್ದಿದ್ದಾರೆ. ಹಳ್ಳಿಗಳು ವೃದ್ಧರ ಕೊಂಪೆಗಳಾಗಿವೆ. ಅಲ್ಲಮಪ್ರಭುವಿನ ಅಪ್ಪ ಇಡೀ ತಾಲ್ಲೂಕಿನಲ್ಲೇ ಅತ್ಯಂತ ಹೆಚ್ಚು ಜಮೀನು ಹೊಂದಿದವನೆಂದು ಖ್ಯಾತಿ ಪಡೆದಿದ್ದ. ಅನೇಕ ತಲೆಮಾರುಗಳಿಂದಲೂ ಅವರ ಕುಟುಂಬದಲ್ಲಿ ಒಂದೊಂದೇ ಮಗು ಜನಿಸುತ್ತಿತ್ತಂತೆ, ಅದೂ ಗಂಡುಮಗು. ಹಾಗೆ ಅಲ್ಲಮಪ್ರಭುವಿನ ಅಪ್ಪನಿಗೂ ಅವನೊಬ್ಬನೇ ಸುಪುತ್ರನಾಗಿದ್ದ. ವಿಷಜ್ವರ ಬಂದು ಐದು ವರ್ಷಗಳ ಹಿಂದೆ ಅಮ್ಮ ಸತ್ತುಹೋದ ಮೇಲಂತೂ ಅಪ್ಪ ಅಲ್ಲಮಪ್ರಭುವಿಗೆಲ್ಲಿ ಮದುವೆಯೇ ಆಗದೆ ವಂಶ ನಿಂತು ಹೋಗಿಬಿಡುತ್ತದೋ